# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

## (ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

ಕ್ರ.ಸಂ :.ಪ್ರವ್ಯ(ಆ ಮತ್ತು ಮಾ.ಸಂ./ಉಪ್ರವ್ಯ/ಮಾಸಂಅ/ಬಿಸಿ-೪೦/೨೦೧೪-೧೫/cys-182

ಕಂಪನಿ ಕಾರ್ಯಾಲಯ,
ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ,
ಕ್ರೆಸೆಂಟ್ ಟವರ್ಸ್, ಕ್ರೆಸಂಟ್ ರೋಡ್,
ಮೊದಲನೇ ಮಹಡಿ, ರೇಸ್ ಕೋರ್ಸ್,
ಬೆಂಗಳೂರು - 560 001.
ದೂ : 22267181 (F) 22356756
E-Mail ID :dgmhrd.work@gmail.com

ದಿನಾಂಕ : 14.11.2014

ಗೆ :

ಎಲ್ಲಾ ಮುಖ್ಯ ಇಂಜಿನಿಯರ್ (ವಿ) ಕಾ ಮತ್ತು ಪಾ ವಲಯ, ಬೆ.ವಿ.ಕಂ.
ಎಲ್ಲಾ ಅಧೀಕ್ಷಕ ಇಂಜಿನಿಯರು (ವಿ) ಕಾ ಮತ್ತು ಪಾ ವೃತ್ತ, ಬೆ.ವಿ.ಕಂ.
ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರು (ವಿ) ಕಾ ಮತ್ತು ಪಾ ವಿಭಾಗ, ಬೆ.ವಿ.ಕಂ.
ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು (ವಿ) ಕಾ ಮತ್ತು ಪಾ ಉಪ ವಿಭಾಗ, ಬೆ.ವಿ.ಕಂ.

ಮಾನ್ಯರೆ,

**ವಿಷಯ:** ತರಬೇತಿ ಕಾರ್ಯಾಗಾರಕ್ಕೆ ಅಧಿಕಾರಿ / ಸಿಬ್ಬಂದಿಗಳನ್ನು ಕಡ್ಡಾಯವಾಗಿ ನಿಯೋಜಿಸುವ ಬಗ್ಗೆ.

**ಉಲ್ಲೇಖ:**
1) ಬೆ.ವಿ.ಕಂ./ಪ್ರವ್ಯ/ಉಪ್ರವ್ಯ/ಮಾಸಂಅ/ಬಿಸಿ-40/2009-10 ದಿನಾಂಕ 29.04.2009.
2) ಬೆ.ವಿ.ಕಂ./ ಬಿಸಿ-9/441/2008-09 ದಿನಾಂಕ 15.09.2009.
3) ಬೆ.ವಿ.ಕಂ./ಬಿಸಿ-40/ಪ್ರವ್ಯ(ಆ ಮತ್ತು ಮಾ.ಸಂ)/2014-15/ಸಿವೈಎಸ್-41 ದಿನಾಂಕ 28.10.2014.

*****

ವಿದ್ಯುತ್ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳ ಕಾರ್ಯ ಕೌಶಲ್ಯ ಉತ್ತಮಗೊಳಿಸುವ ಮೂಲಕ ಗ್ರಾಹಕರಿಗೆ ಹಾಗೂ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡಲು ಸಹಕಾರಿಯಾಗುವ ನಿಟ್ಟಿನಲ್ಲಿ ಕೇಂದ್ರೀಯ ವಿದ್ಯುತ್ ಪ್ರಾಧಿಕಾರವು ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು ಸದರಿ ತರಬೇತಿ ಕಾರ್ಯಕ್ರಮವು ಎಲ್ಲಾ ವರ್ಗದ ಗುಂಪು ಎ, ಬಿ, ಸಿ ಮತ್ತು ಡಿ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮವು ಕಡ್ಡಾಯವಾಗಿರುತ್ತದೆ.

**ಸದರಿ ತರಬೇತಿಯ ಮೂಲವಸ್ತು ನಿಷ್ಟೆಗಳು ಈ ಕೆಳಕಂಡಂತಿವೆ :**

1) ವಿದ್ಯುತ್ ವಿತರಣಾ ಕ್ಷೇತ್ರದಲ್ಲಿರುವ ಕಾನೂನು ಮತ್ತು ನಿಬಂಧನೆಗಳ ಬಗ್ಗೆ ಅರಿವು ಮೂಡಿಸುವುದು.
2) ಗ್ರಾಹಕರಿಗೆ ನೀಡಲಾಗುವ ವಿವಿಧ ಸೌಲಭ್ಯಗಳ ಕುರಿತು ಅರಿವು ಮೂಡಿಸುವುದು.
3) ಬೆ.ವಿ.ಕಂ. ಸೇವೆಗಳ ಬಗ್ಗೆ ಗ್ರಾಹಕರಲ್ಲಿ ವಿಶ್ವಾಸ ಮೂಡಿಸುವುದು.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ನಿರ್ದೇಶನದನ್ವಯ ಸದರಿ ತರಬೇತಿ ಕಾರ್ಯಕ್ರಮಗಳಿಗೆ ಎಲ್ಲಾ ವರ್ಗದ ಅಧಿಕಾರಿ / ಸಿಬ್ಬಂದಿಗಳನ್ನು ನಿಯೋಜಿಸಲು ಕಾಲ-ಕಾಲಕ್ಕೆ ನಿಯಮಿತವಾಗಿ ತಂಡಗಳನ್ನಾಗಿ ರಚಿಸಿ, ಅಧಿಕೃತ ಜ್ಞಾಪನ ಪತ್ರವನ್ನು ಹೊರಡಿಸಲಾಗುತ್ತಿದ್ದು ಸದರಿ ಮಾಹಿತಿಯನ್ನು ಸಂಬಂದ ಪಟ್ಟ ಅಧಿಕಾರಿ / ಸಿಬ್ಬಂದಿಗಳಿಗೆ SMS ಮೂಲಕ, ದೂರವಾಣಿ ಮೂಲಕ ಸಂಪರ್ಕಿಸಿ ಮಾಹಿತಿ ನೀಡಲಾಗುತ್ತಿರುವುದಲ್ಲದೆ, ಕಛೇರಿ ವಿಳಾಸಕ್ಕೆ ಇ-ಮೇಲ್ ಮೂಲಕ ಸಹ ಮಾಹಿತಿ ರವಾನಿಸಲಾಗುತ್ತಿದೆ. ಆದಾಗ್ಯೂ ಸದರಿ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿತ ಅಧಿಕಾರಿಗಳು/ಸಿಬ್ಬಂದಿಗಳು ತಮ್ಮ ದೈನಂದಿನ ಕೆಲಸ ಕಾರ್ಯಗಳಿಗೆ ಅಡಚಣೆ ಆಗುವ ಸಂಭವವಿರುವ, ಕಂದಾಯ ವಸೂಲಾತಿ ಹಾಗೂ ಸಿಬ್ಬಂದಿ ಕೊರತೆಯ ಕಾರಣ ನೀಡಿ ತರಬೇತಿ ಕಾರ್ಯಗಾರಕ್ಕೆ ಗೈರು ಹಾಜರಾಗುತ್ತಿರುವುದು ಹಾಗೂ ಮೇಲಾಧಿಕಾರಿಗಳು ಸಹ ಸದರಿ ಕಾರಣಗಳಿಗೆ ಸಹಮತರಾಗಿ ನಿಯೋಜಿತ ಸಿಬ್ಬಂದಿಗಳನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಿಸದಿರುವ ಬಗ್ಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ಬಂದಿದ್ದು ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುತ್ತಾರೆ.

ಈ ಮೇಲೆ ತಿಳಿಸಿರುವ ತರಬೇತಿ ಕಾರ್ಯಕ್ರಮಗಳು ಸಿಬ್ಬಂದಿ / ಅಧಿಕಾರಿಗಳಿಗೆ ಕಡ್ಡಾಯವಾಗಿದ್ದು ಈ ಸಂಬಂಧ ಪ್ರತಿ ತ್ರೈಮಾಸಿಕ ವರದಿಯನ್ನು ಕೇಂದ್ರೀಯ ವಿದ್ಯುತ್ ಪ್ರಾಧಿಕಾರಕ್ಕೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಸದರಿ ತರಬೇತಿ ಕಾರ್ಯಕ್ರಮಗಳಿಗೆ ಗೈರು ಹಾಜರಾಗುವ ಸಿಬ್ಬಂದಿ / ಅಧಿಕಾರಿಗಳ ವಿರುದ್ಧ ಹಾಗೂ ಕರ್ತವ್ಯದಿಂದ ಬಿಡುಗಡೆಗೊಳಿಸದ ಮೇಲಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ.

ಆದ್ದರಿಂದ ಇನ್ನು ಮುಂದೆ ತರಬೇತಿಗೆ ನಿಯೋಜಿಸಿದ ಸಿಬ್ಬಂದಿಗಳನ್ನು / ಅಧಿಕಾರಿಗಳನ್ನು ಕಡ್ಡಾಯವಾಗಿ ತರಬೇತಿಗೆ ಹಾಜರಾಗಲು ಅನುವು ಆಗುವಂತೆ ಅವರ ಮೇಲಾಧಿಕಾರಿಗಳು ಸದರಿ ಸಿಬ್ಬಂದಿಗಳನ್ನು ಕರ್ತವ್ಯದಿಂದ ಕಡ್ಡಾಯವಾಗಿ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳುವಂತೆ ಈ ಮೂಲಕ ತಿಳಿಸಲು ನಿರ್ದೇಶಿತನಾಗಿರುತ್ತೇನೆ.

ಇಂತಿ ತಮ್ಮ ವಿಶ್ವಾಸಿ,

13/11/14

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ),
ಬೆ.ವಿ.ಕಂ. ಬೆಂಗಳೂರು.

ಪ್ರತಿಗಳು :

1. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಬೆ.ವಿ.ಕಂ. ಬೆಂಗಳೂರು, ಇವರ ಮಾಹಿತಿಗಾಗಿ.
2. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಬೆ.ವಿ.ಕಂ. ಬೆಂಗಳೂರು, ಇವರ ಮಾಹಿತಿಗಾಗಿ.
3. ಆಪ್ತ ಕಾರ್ಯದರ್ಶಿಗಳು ವ್ಯ.ನಿ/ ನಿ (ತಾಂ)/ನಿ (ಹಣಕಾಸು), ಹ ಮತ್ತು ವಾ, ಬೆ.ವಿ.ಕಂ. ಬೆಂಗಳೂರು.
4. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಬೆ.ವಿ.ಕಂ. ಬೆಂಗಳೂರು, ಇವರ ಮಾಹಿತಿಗಾಗಿ.
5. ಮುಖ್ಯ ಕಡತ.